ಬಂದಿತ್ತು. ಕನ್ಯಾಪಿತೃಗಳು, "ನಮ್ಮ ಅಮ್ಮುನ ತುಂಬಾ ಮುದ್ದಾಗಿ ಬೆಳೆಸಿದೀವಿ..." ಎನ್ನುತ್ತ ಮುಂದೆ ಹೇಳಲಾಗದೇ ಗದ್ಗದಿತರಾಗಿ ಸತ್ಯನ ಕೈ ಹಿಡಿದುಕೊಂಡರು. ಅವನಿಗೆಲ್ಲ ಅಯೋಮಯವಾಗಿ, ಅಸಮಾಧಾನವಾಗಿ ಕೊಂಚ ಕೋಪವೂ ಬಂದಿತ್ತು. ಅವನು 'ಸರಳ ವಿವಾಹ' ಬೇಕೆಂದು ಒತ್ತಿ ಹೇಳಿದಾಗ, "ಆಗಲಿ... ಒಂದಷ್ಟು ಹತ್ತಿರದ ನೆಂಟರಿಷ್ಟರ ಮುಂದೆ ಶಾಸ್ತ್ರೋಕ್ತವಾಗಿ ಮಾಡಿಕೊಡುತ್ತೇವೆ" ಎಂದಿದ್ದರು. ಇಂದು ನೋಡಿದರೆ ಛತ್ರದ ತುಂಬ ಸಾವಿರಾರು ಜನ. ಸತ್ಯಪ್ಪ ಪ್ರಶ್ನಾರ್ಥಕವಾಗಿ ನೋಡಿದಾಗ, "ಎಲ್ಲ ನಮ್ಮ... ನಿಮ್ಮ ನೆಂಟರಿಷ್ಟರೇ. ನೂತನ ವಧೂವರರಿಗೆ ಎಲ್ಲರ ಆಶೀರ್ವಾದ ಬೇಕು. ಗಾಂಧೀಜಿಯ ಭಾಷಣಕ್ಕೂ ಸಾವಿರ... ಸಾವಿರವಾಗಿ ಜನ ಸೇರಿದಾಗ ಅವರಿಗೆ ಸಂತೋಷವಾಗ್ತಿತ್ತು ತಾನೆ?" ಎಂದು ಎಲ್ಲಿಗೋ ಹೋಲಿಸಿ ಅವನ ಬಾಯ್ಮುಚ್ಚಿಸಿದರು. ಆದರೂ ಅವನಿಗೆ ಮುಖಭಂಗವಾಗಿದ್ದು ನಿಜ.

ಹೊಸಬದುಕು ಆರಂಭವಾಗಿತ್ತು. ಊಟಿ, ಕೊಡೈಕೆನಾಲಿನ ಹನಿಮೂನನ್ನು ಮಾವನವರೇ ಬುಕ್ ಮಾಡಿಸಿದ್ದರು. ನಳಿನಿಯನ್ನು ಮರೆತು ಲಕ್ಷ್ಮಿಯೊಂದಿಗೆ ಬೆರೆಯುವುದು ಕಷ್ಟಸಾಧ್ಯವಾದರೂ ರೂಢಿಸಿಕೊಂಡ. ಗಾಂಧೀಜಿಯ ಸರಳತೆ, ಸಾಬರಮತಿ ಆಶ್ರಮ... ಇತ್ಯಾದಿಗಳ ಬಗ್ಗೆ ವರ್ಣಿಸಿದ. ಅವಳು ಮೆತ್ತಗೆ, "ನಾವು ಇಲ್ಲಿ ಬಂದದ್ದು ಹನಿಮೂನಿಗಾ ಅಥವಾ ಗಾಂಧೀಜಿಯ ಬಗ್ಗೆ ತಿಳಿದುಕೊಳ್ಳಕ್ಕಾ?" ಎಂದಾಗ ತೆಪ್ಪಗಾದ. ಅವನಿಗಾಗಲೇ ಅವಳು ಮಾಮೂಲು ದಾರಿಯಲ್ಲಿ ಸಾಗುತ್ತಿದ್ದುದು ಕಂಡು ಬಂದಿತ್ತು. ಅವಳದೇನು ತಪ್ಪು? ಚಿಕ್ಕಂದಿನಿಂದಲೂ ವೈಭವದಲ್ಲೇ ಬೆಳೆದವಳಿಗೆ ಸರಳ ಬದುಕಿನ ಬಗ್ಗೆ ತಿಳಿ ಹೇಳುವುದೆಂದರೆ ಗೋರ್ಕಲ್ಲ ಮೇಲೆ ಮಳೆ ಸುರಿದಂತಾಗಿತ್ತು. ಅವಳಿಗೆ ಅವನ ರೀತಿ ಹೊಸದು. ಅವಳ ನೆಂಟರಿಷ್ಟರೆಲ್ಲಾ ಚೆನ್ನಾಗಿ ತಿಂದುಂಡು, ಪಟ್ಟೆಸೀರೆ ಆಭರಣ ಧರಿಸಿ ಮೆರೆಯುವುದೇ ಬದುಕು ಎಂದುಕೊಂಡಿದ್ದವರು. ದುಡ್ಡಿನ ಹೊಳೆ ಹರಿಯುತ್ತಿತ್ತಲ್ಲ. ಅವರ ಮಧ್ಯೆ ಗಾಂಧೀಜಿಯ ಸರಳತೆ... ಆದರ್ಶಗಳನ್ನು ಹೇಳುತ್ತಾ ಅವರ ಛಾಯೆಯಲ್ಲಿ ಬದುಕಲಿಚ್ಛಿಸುತ್ತಿರುವ ಪತಿ ವಿಚಿತ್ರವಾಗಿ ಕಂಡಿದ್ದ. ಕೆಲವು ದಿನಗಳವರೆಗೆ ಇತ್ತ ಪತಿಯನ್ನೂ... ಅತ್ತ ತಂದೆಯನ್ನೂ ಓಲೈಸುತ್ತ ಹೆಣಗಾಡಿದ್ದಿತ್ತು. ಕ್ರಮೇಣ ಅಪ್ಪನ ದಾರಿಗೆ ತಿರುಗಿದ ಜೀವನಚಕ್ರ ಉರುಳತೊಡಗಿತು. ಸತ್ಯನ ಸತ್ಯದ ದಾರಿಯಲ್ಲಿ ಅವನೊಬ್ಬನದೇ ಹೆಜ್ಜೆಗುರುತುಗಳು ಮೂಡಲಾರಂಭಿಸಿದವು.

ಹೊಸ ಉದ್ಯೋಗವೂ ಅವನಿಗೆ ದಿಗಿಲು ಹುಟ್ಟಿಸಿತ್ತು. ರೆವಿನ್ಯೂ ಇಲಾಖೆ... ಮೇಲಿನಿಂದ ಕೆಳಗಿನವರೆಗೂ ಲಂಚಾವತಾರ. ಪ್ರತಿಭಟನೆಗೆ ಅರ್ಥವೇ ಇಲ್ಲದಂಥ ವ್ಯವಸ್ಥೆ. ತನ್ನ ವಿರೋಧ ಇಲ್ಲೆಲ್ಲಿಯೂ ನಡೆಯುವುದಿಲ್ಲ ಎಂದರಿತ. ತನಗೆ ನೌಕರಿ ದೊರೆತದ್ದೇ ಮಾವನ ಕೃಪಾಕಟಾಕ್ಷದಿಂದ ಎಂದರಿವಾದಾಗ ಕ್ರುದ್ಧನಾದ. ಯಾರಿಗೂ ಗೊತ್ತಾಗದಂತೆ ಬೇರೆಡೆ ಅರ್ಜಿ ಗುಜರಾಯಿಸಿದ. ತತ್ಫಲವಾಗಿ ಬ್ಯಾಂಕೊಂದರಲ್ಲಿ ಕೆಲಸ ದೊರೆಯಿತು. ಮನೆಯಲ್ಲಿ ಘನಘೋರ ಸಂಗ್ರಾಮವೇ ನಡೆದುಹೋಯಿತು. ಇತ್ತ ಶ್ರೀಪತಿರೆಡ್ಡಿಗಳೂ... ಅತ್ತ ಕೇಶವರೆಡ್ಡಿಗಳೂ ಕೋಪೋದ್ರಿಕ್ತರಾದರು. ಹೆಂಗಳೆಯರ ಕಂಗಳಲ್ಲಿ ಗಂಗಾಭವಾನಿ ಪ್ರತ್ಯಕ್ಷಳಾದಳು. ಕೈತುಂಬಿ... ಜೇಬು ತುಂಬಿಸುವ ಉದ್ಯೋಗ ಬಿಟ್ಟು ಬ್ಯಾಂಕಿಗೆ ಸೇರುವುದೇ? "ಉಹ್ಞೂಂ..." ಎಂದುಬಿಟ್ಟರು. ಆದರೆ, ಸತ್ಯ ನಿರ್ಧರಿಸಿಬಿಟ್ಟಿದ್ದ. ಬ್ಯಾಂಕಿನಲ್ಲೇ ತನ್ನ ಭವಿಷ್ಯ ರೂಪಿಸಿಕೊಳ್ಳಲು... ಗಾಂಧಿ ತತ್ವಗಳನ್ನು ಮುಂದುವರೆಸಲು... ಕೊನೆಗೆ ಗಾಂಧೀಜಿಯೇ ಆಶಾಕಿರಣವಾದರು. ಮನೆಯಲ್ಲೇ ಸತ್ಯಾಗ್ರಹ ಆರಂಭಿಸಿದ. ನಿರಶನ ಎರಡನೇ ದಿನ ದಾಟಿ ಮುಂದುವರೆಯಿತು. ನಿರುಪಾಯರಾಗಿ ಎಲ್ಲರೂ ಒಪ್ಪಿದರು. ಮೂರನೇ ದಿನ ಅವನು ಹಣ್ಣಿನ ರಸ ಕುಡಿದು ಗೆಲುವಿನ ನಗೆ ಬೀರಿದ್ದ. ಕೇಶವರೆಡ್ಡಿಗಳು ಮಗಳ ತಲೆ ನೇವರಿಸಿ, "ಅಮ್ಮು.. ನೀನು ಯೋಚನೆ ಮಾಡಬೇಡಮ್ಮ. ಅವನು ಹೇಗೆ ಬೇಕಿದ್ದರೂ ಬದುಕಿಕೊಳ್ಳಲಿ. ನಾನು ನಿನ್ನ ಬೆನ್ನಿಗಿದ್ದೇನೆ. ಏಳುಕೊಂಡಲವಾಡ ಮತ್ತೆ ವಾಸವಿ ಎಲ್ಲ ಒಳ್ಳೇದೇ ಮಾಡ್ತಾರೆ" ಎಂದಿದ್ದರು. ಅದನ್ನು ಕೊನೆಯವರೆಗೆ ಪಾಲಿಸಿದರು ಕೂಡ. ಮಕ್ಕಳು ವಸಂತ, ಶಿರೀಷಾ ಏನು ಬೇಕಿದ್ದರೂ, "ಅಪ್ಪ ಕೊಡಿಸಿ" ಎನ್ನಲಿಲ್ಲ. "ತಾತ... ಬೇಕು" ಎನ್ನುವುದೇ. ಕೊಡಿಸುತ್ತಿದ್ದುದು ಬಾಲಕೃಷ್ಣ ಮಾವ. ಒಡವೆ ವಸ್ತ್ರಗಳಷ್ಟೇ ಅಲ್ಲ, ಮೂರು ಚಕ್ರದ